# ? ಕೇಳಿ ತಿಳಿಯಿರಿ ?

[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು]

? ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣ ಆಶ್ರಮಕ್ಕೆ ಹೋಗಿ ಕುಳಿತರೆ ಮನಸ್ಸಿಗೆ ಏನೋ ಒಂದು ರೀತಿಯ ನೆಮ್ಮದಿ, ಶಾಂತಿ ಸಿಗುತ್ತದೆ. ಪರಮಹಂಸರ ಮುಂದೆ ಕುಳಿತರೆ ಹೊರಗೆ ಒಳಗೆ ಶಾಂತಿ ತುಂಬಿದಂತಾಗುತ್ತದೆ. ಮಂತ್ರದೀಕ್ಷೆಯಿಂದ ಇನ್ನೂ ಅವರಿಗೆ ಹತ್ತಿರ ಆಗುತ್ತೇವೆಯೇ? ತಿಳಿಸಿಕೊಡಿ. ಹಂಸಪಕ್ಷಿ ಈಗಲೂ ಇದೆಯೇ? ಹಾಲು ನೀರನ್ನು ಬೇರೆಯಾಗಿ ಸೇವಿಸುತ್ತದೆ ಎಂಬುದು ಸತ್ಯವೇ? ಇದರ ವಿಶೇಷತೆ ಏನು ತಿಳಿಸಿಕೊಡಿ.

☆ ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣ ಆಶ್ರಮ ಶಾಂತಿಧಾಮವಾಗಿರುವುದೂ ಅದರಲ್ಲೂ ಸಾಧಕರಿಗೆ ಸಾಧನೆಯಲ್ಲಿ ಹೊಸ ಉತ್ಸಾಹ, ಸ್ಫೂರ್ತಿಗಳನ್ನು ತುಂಬುತ್ತಿರುವುದೂ ಒಂದು ಸಾರ್ವತ್ರಿಕ ಅನುಭವ. ಶ್ರೀಮಾತೆ ಶಾರದಾದೇವಿ ಹಾಗೂ ಹಿರಿಯ ಸಂನ್ಯಾಸಿಯರು ಈ ಆಶ್ರಮದಲ್ಲಿ ನೆಲೆಸಿದ್ದು ಪವಿತ್ರ, ಪ್ರಶಾಂತವಾದ ವಾತಾವರಣಕ್ಕೆ ಕಾರಣರಾಗಿದ್ದಾರೆ. ಆದ್ದರಿಂದ ಇಲ್ಲಿಗೆ ಬರುವ ಪ್ರತಿಯೊಬ್ಬರಿಗೂ ನೆಮ್ಮದಿಯ ಅನುಭವವಾಗುತ್ತದೆ. ಪ್ರಕ್ಷುಬ್ಧತೆ ಎಲ್ಲೆಲ್ಲೂ ಮನೆಮಾಡಿಕೊಂಡಿರುವ ಇಂದಿನ ದಿನಗಳಲ್ಲಿ ಮಾನಸಿಕ ಶಾಂತಿ ಹಾಗೂ ನೆಮ್ಮದಿ ಅನೇಕರಿಗೆ ಬಿಸಿಲ್ಗುದುರೆಯೇ ಆಗಿದೆ. ಹೀಗಿರುವಾಗ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದಂತಹ ಓಯೆಸಿಸ್‌ಗಳ ಅಗತ್ಯ ಇಂದು ಎಂದಿಗಿಂತಲೂ ಹೆಚ್ಚಾಗಿದೆ.

ಇದು ಧಾವಂತದ ಯುಗ. ಒಂದು ಕ್ಷಣವೂ ವಿರಮಿಸದೆ ಮನಸ್ಸು ವಿಪರೀತ ವಿಕಲ್ಪಗಳಿಗೊಳಗಾಗಿ ಸರ್ವದಾ ಚಡಪಡಿಸುತ್ತಿರುತ್ತದೆ. ಈ ಚಡಪಡಿಕೆ ನಮ್ಮ ನರಗಳ ಮೇಲೆ ದುಷ್ಪ್ರಭಾವ ಬೀರಿ ಅದನ್ನು ದುರ್ಬಲಗೊಳಿಸುತ್ತದೆ. ಹಾಗಾಗಿ ಅತ್ಯಂತ ಸಣ್ಣ ವಿಷಯವೇ ಸಾಕು ನಮ್ಮ ಮನಸ್ಸಿನ ನೆಮ್ಮದಿ, ಶಾಂತಿಗಳನ್ನು ಕೆಡಿಸಲು. ಕದಡಿದ ಸರೋವರದಂತಾಗಿರುತ್ತದೆ ನಮ್ಮ ಮನಸ್ಸುಗಳು. ಹೀಗಾಗಿ ಆಶ್ರಮದಲ್ಲಿನ ನೀರವ ಪಾವನ ವಾತಾವರಣದಿಂದ ಮನಸ್ಸನ್ನು ಮತ್ತೆ ಮತ್ತೆ ಚೇತನಗೊಳಿಸಿಕೊಳ್ಳಬೇಕಾಗುತ್ತದೆ. ಇಂದು ಎಲ್ಲಕ್ಕಿಂತ ಹೆಚ್ಚಾಗಿ ಮನಸ್ಸು ನೆಮ್ಮದಿ ಶಾಂತಿಗಳನ್ನು ಪಡೆಯುವ ಮಾರ್ಗವನ್ನು ನಾವು ಕಂಡುಕೊಳ್ಳಬೇಕಾಗಿದೆ. ಶಾಂತಿ ನೆಮ್ಮದಿಗಳಿಂದ ತುಂಬಿದ ಮನಸ್ಸು ಶಕ್ತಿಯುತವಾದ ಮನಸ್ಸಾಗಿರುತ್ತದೆ.

ಕೆಲವರು ಏಕಾಂತದಲ್ಲಿ ಶಾಂತಿ ನೆಮ್ಮದಿಯನ್ನು ಅರಸುತ್ತಾರೆ. ಆದರೆ ಏಕಾಂತವು ಭವ್ಯವಾದ ಭವನ ಅಥವಾ ಮತ್ತಾವುದೋ ಬಾಹ್ಯ ಅನುಕೂಲಗಳನ್ನು ಅವಲಂಬಿಸಿರುವುದಿಲ್ಲ. ಗುಡಿಸಿಲಿನಲ್ಲೂ ಕೂಡ ಏಕಾಂತವನ್ನು ಅನುಭವಿಸಬಹುದು. ರಾಮಕೃಷ್ಣ ಮಠಗಳಲ್ಲಿನ ಶುಭ್ರ, ನೀರವ ವಾತಾವರಣ, ಪ್ರಾರ್ಥನಾ ಮಂದಿರ, ಶ್ರೀಗುರುಮಹಾರಾಜರಿಗೆ ವಿಧಿಯುಕ್ತವಾಗಿ ನಿತ್ಯಸಲ್ಲುವ ಪೂಜೆ – ಇವುಗಳೇ ಶಾಂತಿಯ ಅನುಭವಕ್ಕೆ ಪ್ರೇರಕವಾಗಿವೆ.

ಇನ್ನು ಮಂತ್ರದೀಕ್ಷೆಯಿಂದ ದೇವರಿಗೆ ಹತ್ತಿರವಾಗುವ ಮಾತು. ಮನಸ್ಸು ಗುರುಮಹಾರಾಜರ ಸಾನ್ನಿಧ್ಯದಲ್ಲಿ ಪಡೆದ ಶಾಂತಿಯನ್ನು ದೃಢಗೊಳಿಸಿಕೊಳ್ಳಬೇಕಾದರೆ, ನಿರಂತರವಾಗಿಸಿಕೊಳ್ಳಬೇಕಾದರೆ ಅವರ ನಿರಂತರ ನಾಮಸ್ಮರಣೆಯಿಂದ ಸಾಧ್ಯ. ಬೇಲೂರು ಮಠದಲ್ಲಿ ಗುರು ಸ್ಥಾನದಲ್ಲಿರುವವರಿಂದ ಶ್ರೀರಾಮಕೃಷ್ಣರ ನಾಮದ ದೀಕ್ಷೆ ಪಡೆದಾಗ ಅವರು ತಮ್ಮ ಸಾಧನೆಯಿಂದ ಗಳಿಸಿದ್ದನ್ನು ಹೃತ್ಪೂರ್ವಕವಾಗಿ ಶಿಷ್ಯನ ಶ್ರೇಯೋಭಿವೃದ್ಧಿಗಾಗಿ ಮಂತ್ರದೀಕ್ಷೆಯ ಮೂಲಕ ಅನುಗ್ರಹಿಸುತ್ತಾರೆ. ಆದರೆ ಬರೀ ದೀಕ್ಷೆಯಿಂದ ಏನೂ ಸಾಧಿತವಾಗುವುದಿಲ್ಲ. ಇದು ಒಬ್ಬ ರೋಗಿ ವೈದ್ಯನ ಬಳಿ ಚಿಕಿತ್ಸೆಗೆ ಹೋದಂತೆ. ವೈದ್ಯನೇನೋ ತುಂಬು ಹೃದಯದಿಂದ ಔಷಧಿ ಕೊಡುತ್ತಾನೆ. ಆ ಔಷಧಿಯನ್ನು ಸೇವಿಸಿದರೆ ಅಲ್ಲವೆ, ನಮ್ಮ ಮನದಲ್ಲಿ ಬೇರು ಬಿಟ್ಟಿರುವ ವ್ಯಾಧಿಗಳು ನಾಶವಾಗಿ ಮನಸ್ಸು ಸ್ವಸ್ಥತೆಯನ್ನು ಅನುಭವಿಸುವುದು. ನಮ್ಮ ಮನಸ್ಸು ಹೆಚ್ಚು ಹೆಚ್ಚು ಸ್ವಸ್ಥವಾದಷ್ಟೂ ಮನಸ್ಸು ತಿಳಿಯಾಗಿ ಉನ್ನತ ಸ್ತರದ ಆನಂದ ನೆಮ್ಮದಿಯನ್ನು ಅನುಭವಿಸುತ್ತದೆ. ಇದಾಗುವುದು ಆತನ ನಾಮದ ಮಹಿಮೆಯಿಂದ. ಮನಸ್ಸು ಹೆಚ್ಚು ಆನಂದವನ್ನು ಅನುಭವಿಸಿದಷ್ಟು ಇನ್ನೂ ಹೆಚ್ಚು ಶ್ರೀರಾಮಕೃಷ್ಣರ ನಾಮದಲ್ಲಿ ರುಚಿಯುಂಟಾಗಿ ಅವರಿಗೆ ಹತ್ತಿರವಾಗುತ್ತೇವೆ.

ಇನ್ನು ಹಂಸಪಕ್ಷಿ ಈಗಲೂ ಇರುವ ಬಗ್ಗೆ ಹಾಗೂ ಹಂಸಪಕ್ಷಿ ನೀರನ್ನು ಬಿಟ್ಟು ಹಾಲನ್ನು ಸ್ವೀಕರಿಸುವ ಬಗ್ಗೆ. ಹಂಸವು ಭಾರತದಲ್ಲಿ ಈಗ ಅಪರೂಪವಾದಂತಹ ಪಕ್ಷಿ. ಕೇವಲ ಹಿಮಾಲಯದ ಬಹು ಎತ್ತರದ ಸರೋವರಗಳಲ್ಲಿ ಹಾಗೂ ಚೀನ, ರಷ್ಯಾ, ಯುರೋಪ್ ದೇಶಗಳಲ್ಲಿ ಬಿಳಿಯ ಹಾಗೂ ಕರಿ ಬಣ್ಣದ ಹಂಸಗಳು ಕಂಡುಬರುತ್ತವೆ. ಹಂಸವು ಹಾಲನ್ನು ಕುಡಿಯುವುದು ಕವಿಯ ಕಲ್ಪನೆಯಲ್ಲಿ. ಇದು ವಾಸ್ತವವಲ್ಲ. ಅದು ಜಲಚರಗಳನ್ನು ಹಾಗೂ ಕೆಲವು ಸಸ್ಯಗಳನ್ನು ತಿನ್ನುವುದು. ಉದಾಹರಣೆಯನ್ನು ನಾವು ಸರಿಯಾಗಿ ಅರ್ಥಮಾಡಿ ಕೊಳ್ಳಬೇಕು. ವಿವೇಕಕ್ಕೆ ಪ್ರಾಶಸ್ತ್ಯ ನೀಡಲು ಹಂಸವನ್ನು ಬಳಸಲಾಗಿದೆ ಅಷ್ಟೆ. ಮೂಲಭಾವನೆಯನ್ನು ಗ್ರಹಿಸೋಣ.